ಬಾಲ ಬಳಗ

# ಚಿಗುರು ಚಿಲುಮೆ



Volume 01 Issue 06

January 15 2015

# ಸಂಪಾದಕೀಯ

ಬಾಲಬಳಗದ ಆತ್ಮೀಯ ಬಂಧುಗಳಿಗೆ ನಮಸ್ಕಾರ.

ಹುಲ್ಲಾಗು ಬೆಟ್ಟದಡಿ, ಮನೆಗೆ ಮಲ್ಲಿಗೆಯಾಗು
ಕಲ್ಲಾಗು ಕಷ್ಟಗಳ ವಿಧಿಮಳೆಯು ಸುರಿಯೆ
ಬೆಲ್ಲ ಸಕ್ಕರೆಯಾಗು ದೀನ ದುರ್ಬಲರಿಗೆ
ಎಲ್ಲರೊಳಗೊಂದಾಗು ಮಂಕುತಿಮ್ಮ

ನಾಲ್ಕು ಅಪೂರ್ವ ಸಾಲುಗಳಲ್ಲಿ ಬದುಕುವ ರೀತಿಯನ್ನು ಸರಳವಾಗಿ ಸಾರುತ್ತಾರೆ ಡಿ.ವಿ.ಜಿ. ಹೀಗೆ ಬದುಕುವ ರೀತಿ-ನೀತಿಗಳನ್ನು ಮಕ್ಕಳಲ್ಲಿ ಬೆಳೆಸುವುದು, ಬಾಲಬಳಗದ ಧ್ಯೇಯಗಳಲ್ಲೊಂದು. 'ಸಾಮಾಜಿಕ ಕಳಕಳಿ' ಪ್ರತಿಯೊಬ್ಬ ಪ್ರಜೆಯ ಕರ್ತವ್ಯ ಹಾಗೂ ಸಮಾಜದ ಅಭಿವೃದ್ಧಿಗೆ ಅತ್ಯವಶ್ಯ. ಈ ನಿಟ್ಟಿನಲ್ಲಿ ಕೆಲವು ವಿಚಾರಗಳನ್ನು ಬೆಳಕಿಗೆ ತರುವುದು ಈ ಸಂಚಿಕೆಯ ಪ್ರಮುಖ ಉದ್ದೇಶ. ಪ್ರಶ್ನಾವಳಿಗಳ ಮೂಲಕ ಮಕ್ಕಳ ಸಾಮಾಜಿಕ ಜ್ಞಾನದ ಸ್ತರವನ್ನು ಅರಿಯುವುದು ಹಾಗೂ ಸಮಾಜದ ಆಗು ಹೋಗುಗಳ ಬಗ್ಗೆ ಚಟುವಟಿಕೆಗಳ ಮೂಲಕ ಅರಿವು ಮೂಡಿಸುವುದು ನಮ್ಮ ಉದ್ದೇಶ.

ನಮ್ಮ ಪತ್ರಿಕೆಯ ಹಿಂದಿನ ಸಂಚಿಕೆಗಳ ಬಗ್ಗೆ ಸಂತೋಷದ ಸುದ್ದಿಗಳೆಂದರೆ, ನಮ್ಮ ಪತ್ರಿಕೆಯಲ್ಲಿ ಪ್ರಕಟವಾದ 'ಗುರು ಪರಿಕಲ್ಪನೆ'ಯ ವಿಚಾರದಿಂದ ಪ್ರೇರಿತರಾಗಿ ಜಮಖಂಡಿಯ 'ತುಂಗಳ' ಶಾಲೆಯವರು ಗೌರಿ ಮೌಶಿಯವರನ್ನು ಎರಡು ದಿನದ ಕಾರ್ಯಾಗಾರ ನಡೆಸಲು ಆಹ್ವಾನಿಸಿದ್ದಾರೆ. ತಂತ್ರಜ್ಞಾನದ ಸಕಾರಾತ್ಮಕ ಬಳಕೆಯನ್ನು ಪ್ರೋತ್ಸಾಹಿಸುವ ಸಲುವಾಗಿ ಇ-ಮೇಲ್ ಐ.ಡಿ ಸೃಷ್ಟಿಸುವ ಕಾರ್ಯ ಬಹಳ ಉತ್ಸಾಹದಿಂದ ಪ್ರಾರಂಭವಾಗಿ, ಈಗ ಹಲವಾರು ಪಾಲಕರು ಹಾಗೂ ಮಕ್ಕಳು ಇದನ್ನು ಬಳಸುತ್ತಿದ್ದಾರೆ.

ಫೆಬ್ರುವರಿ ೭ ಮತ್ತು ೮ ರಂದು ನಮ್ಮ ಶಾಲೆಯ ಆವರಣದಲ್ಲಿ 'ಮಕ್ಕಳ ಹಬ್ಬ' ಹಮ್ಮಿಕೊಳ್ಳಲಾಗುತ್ತಿದೆ. ಹಬ್ಬಕ್ಕೆ ಸಿದ್ಧತೆ ನಡೆಸಿರುವ ಮಕ್ಕಳು, ಬಣ್ಣ ಹಚ್ಚಿ, ವೇದಿಕೆ ಏರಿ, ವಿವಿಧ ಕಾರ್ಯಕ್ರಮಗಳ ಮೂಲಕ ನಮ್ಮೆಲ್ಲರನ್ನೂ ಮೋಡಿ ಮಾಡುವ ಕ್ಷಣಗಳನ್ನು ಕಳೆದುಕೊಳ್ಳಬೇಡಿ. ವಿಶಿಷ್ಟವಾದ ಈ ಹಬ್ಬಕ್ಕೆ ಚಿಗುರು ಚಿಲುಮೆ ವತಿಯಿಂದ ಎಲ್ಲರಿಗೂ ಆತ್ಮೀಯ ಸ್ವಾಗತ.

ಸೃಜನಶೀಲ ಕೃತಿಗಳು, ಪ್ರವಾಸ-ಕಥನ ಮುಂತಾದ ಸ್ಥಿರ ಹಾಗೂ ವಿಶೇಷ ಅಂಕಣಗಳೊಂದಿಗೆ ಈ ಸಂಚಿಕೆ ರಂಗುರಂಗಾಗಿದೆ. ಮಕ್ಕಳು, ಪಾಲಕರು ಹಾಗೂ ಶಿಕ್ಷಕರಿಂದ ಕವನಗಳು, ಲೇಖನಗಳು, ಚಿತ್ರಗಳು, ವಿವಿಧ ಕಲಾತ್ಮಕ ಕೃತಿಗಳು ಚಿಲುಮೆಯಂತೆ ಹೊರಹೊಮ್ಮುತ್ತಿವೆ. ಇನ್ನೊಂದು ವಿಶೇಷವೆಂದರೆ ಮಕ್ಕಳೊಂದಿಗೆ ಚರ್ಚಿಸಿದಾಗ ಮಕ್ಕಳು ಸೂಚಿಸಿದ ಪುಸ್ತಕ ಹಾಗು ಚಲನಚಿತ್ರವನ್ನು ಈ ಸಲದ ಅಂಕಣದಲ್ಲಿ ಕೊಡಲಾಗಿದೆ. ನಮ್ಮ ಆರು ತಿಂಗಳ ಸಸಿ "ಚಿಗುರು ಚಿಲುಮೆ", ಎಲ್ಲರ ಪೋಷಣೆಯಿಂದ ಚಿಗುರಿ ಸೊಂಪಾಗಿ ಬೆಳೆಯುತ್ತಿರುವುದು ಬಹಳ ಸಂತೋಷದ ವಿಷಯ. ನಿಮ್ಮ ಅನಿಸಿಕೆ ನಮ್ಮೆಲ್ಲರ ಈ ಪತ್ರಿಕೆಯ ಸುಧಾರಣೆ ಹಾಗೂ ಸರ್ವತೋಮುಖ ಅಭಿವೃದ್ಧಿಗೆ ಅಮೂಲ್ಯವಾದ ಬೆಂಬಲ.

ನಿಮ್ಮೆಲ್ಲರ ಸಲಹೆ ಸಹಕಾರಗಳ ನಿರೀಕ್ಷೆಯಲ್ಲಿರುವ
ಸಂಪಾದಕೀಯ ತಂಡ..



ಚಿನ್ಮಯೀ

ಸುಗ್ಗಿಯ ಚಳಿಗಾಲ
ಸವಿಯೋಣ ಎಳ್ಳು ಬೆಲ್ಲ
ಬೇಕೆಮಗೆ ಸ್ನೇಹ ತೈಲ
ಆಡೋಣ ಸವಿಮುತ್ತು ನಾವೆಲ್ಲ
ಹರಡುತ್ತ ನಗು ಸುತ್ತೆಲ್ಲ
ಆಗೋಣ ಏಕಜೀವ ನಾವೆಲ್ಲ
ಎಲ್ಲರಿಗೂ ಎಳ್ಳು-ಬೆಲ್ಲ ಹಬ್ಬದ ಹಾರ್ದಿಕ ಶುಭಾಶಯಗಳು.

# ಆಟ, ಗಣಿತ, ಮೋಜು, ಕಲಿಕೆ!!

IIT ಯಲ್ಲಿ ಓದು ಮುಗಿಸಿ ಸಾಫ್ಟವೇರ್ ಇಂಜಿನೀಯರಾಗಿ ಕಾರ್ಯ ನಿರ್ವಹಿಸಿ, ಗಣಿತದಲ್ಲಿ ವಿಶೇಷ ಆಸಕ್ತಿ ವಹಿಸಿಕೊಂಡವರು ಶ್ರೀ. ಆಮೋದ್ ಕಾರ್ಖಾನಿಸ್. ದಿನಾಂಕ ೦೪/೦೧/೨೦೧೫ ಭಾನುವಾರದಂದು ನಮ್ಮ ಶಾಲೆಯ ಆವರಣದಲ್ಲಿ ೫,೬,೭ ನೇ ತರಗತಿಯ ಪಾಲಕರಿಗೆ ಒಂದು ದಿನದ "ಆಟದೊಂದಿಗೆ ಗಣಿತ" ಕಾರ್ಯಾಗಾರವನ್ನು ನಡೆಸಿಕೊಟ್ಟರು.

ಗಣಿತ ಕಷ್ಟಕರವಾದಂಥದ್ದು, ಭಯ ಹುಟ್ಟಿಸುವಂಥದ್ದು, ಆಸಕ್ತಿಕರವಲ್ಲದ ನೆನಪಿಟ್ಟುಕೊಳ್ಳಲು ಆಗದಂಥ ಒಂದು ಕ್ಲಿಷ್ಟ ವಿಷಯ ಎಂಬ ನಮ್ಮ ಭಾವನೆ ಶಿಬಿರದ ಕೊನೆಯಲ್ಲಿ ಸುಳ್ಳಾಗಿತ್ತು.

ಅಂಕಿಗಳ ಪರಿಚಯವನ್ನು ಹೇಗೆ ಮಾಡಿಸಬೇಕು, ಸಂಕಲನ, ವ್ಯವಕಲನ, ಗುಣಾಕಾರ, ಭಾಗಾಕಾರಗಳನ್ನು ಮಗುವಿಗೆ ಆಟದ ಮೂಲಕ, ತಾನು ಏನೋ ಒಂದು ಕ್ಲಿಷ್ಟವಾದುದನ್ನು ಕಲಿಯುತ್ತಿದ್ದೇನೆ ಎಂಬುದು ಅರಿವಿಗೂ ಬರದಂತೆ, ಆರಾಮವಾಗಿ ತಿಳಿಸಿಕೊಡಬಹುದು. ಪೇಪರ್ ಕಟಿಂಗ್ ಮೂಲಕ ಹಲವು ಸೂತ್ರಗಳನ್ನು ಹೇಗೆ ಕಂಡುಹಿಡಿಯಬೇಕೆಂದು ತಿಳಿಸಿಕೊಟ್ಟರು. ಗಣಿತದ ಸೂತ್ರಗಳನ್ನು ಬಾಯಿಪಾಠ ಮಾಡುವುದಲ್ಲ. ಮೂಲದಲ್ಲಿ ಅದು ಹೇಗೆ ಬಂದಿತೆಂದು ಅರಿಯಬೇಕು.


ಪ್ರಕೃತಿಯಲ್ಲಿಯೂ ಎಲ್ಲ ಕಡೆ ಗಣಿತವಿದೆ. ಅದನ್ನು ನಾವು ನೋಡುವ ಮನೋಭಾವವನ್ನು ಬೆಳೆಸಿಕೊಳ್ಳಬೇಕು. ನಾವು ದಿನನಿತ್ಯ ಮಾಡುವ ಊಟದ ಮೂಲಕವೂ ಗಣಿತದ ವಿವಿಧ ಪರಿಕಲ್ಪನೆಗಳನ್ನು ತಿಳಿಸಿಕೊಟ್ಟರು.

ಶೇಕಡವಾರು ಕಂಡುಹಿಡಿಯುವುದು, ಭಿನ್ನರಾಶಿ, ಕೋನಗಳು, ತ್ರಿಕೋನಗಳು, ರೇಖಾಗಣಿತ ಎಲ್ಲವನ್ನೂ ಆಟದ ಮೂಲಕ, ಊಟದ ಮೂಲಕ, ಪ್ರಕೃತಿಯ ಮೂಲಕ ಸರಳವಾಗಿ ತಿಳಿಸಿಕೊಟ್ಟರು.

ಗಣಿತ-ಗಣಿತ ಮಾತ್ರವಲ್ಲ. ಅದನ್ನು ಬೇರೆ ಆಯಾಮದಿಂದಲೂ ಅಭ್ಯಾಸ ಮಾಡಿಕೊಳ್ಳಬೇಕು. ಇದರಿಂದ ವೈಜ್ಞಾನಿಕ ಮನೋಭಾವನೆ ಬೆಳೆಸಿಕೊಳ್ಳಬಹುದು. ಗಣಿತದ ಸಮಸ್ಯೆಗಳನ್ನಷ್ಟೇ ಅಲ್ಲ. ಜೀವನದ ಸಮಸ್ಯೆಗಳನ್ನು ಸರಳವಾಗಿ ಪರಿಹರಿಸಿಕೊಳ್ಳಬಹುದು ಎಂಬುದನ್ನು ಮನವರಿಕೆ ಮಾಡಿಕೊಟ್ಟರು.

ಒಟ್ಟಿನಲ್ಲಿ ಹೇಳುವುದಾದರೆ ಪಾಲಕರಾಗಿ ನಾವೂ ಕೂಡ ಮಕ್ಕಳ ಜೊತೆ ಗಣಿತದ ಆಟದಲ್ಲಿ ಪಾಲ್ಗೊಳ್ಳಬಹುದು ಮತ್ತು ಈ ಸುಂದರ ಪಾಲಕತ್ವವನ್ನು ಇನ್ನೂ ಆನಂದಮಯವಾಗಿಸಬಹುದು.

ಹೇಮಾ ಹೆಬ್ಬಾರ
ಪಾಲಕರು



## ಆಟದ ಮೂಲಕ ಗಣಿತ

ಗಣಿತವು ಜೀವನದ ಅವಿಭಾಜ್ಯ ಅಂಗವಾಗಿದೆ. ಆದ್ದರಿಂದ ಗಣಿತದ ಕಲಿಕೆಯು ಅನಿವಾರ್ಯವಾಗಿದೆ. ಹಾಗಾಗಿಯೇ ಈ ಕಲಿಕೆಯ ಬಗ್ಗೆ ಆತಂಕ ಭಯ ಹುಟ್ಟು ಹಾಕಿದೆ. ಇದನ್ನು ಹೋಗಲಾಡಿಸಲು, ಇದರ ಮಹತ್ವವನ್ನು ತಿಳಿಸಿ, ಆಸಕ್ತಿದಾಕವಾಗಿ, ಉಲ್ಲಾಸದಾಯಕವಾಗಿ ಮಾಡಬೇಕಾಗಿದೆ.

ಈ ಉದ್ದೇಶವನ್ನು ಇಟ್ಟುಕೊಂಡು ನಮ್ಮ ಶಾಲೆಯಲ್ಲಿ ದಿ.೨೧/೧೧ ಹಾಗೂ ೨೨/೧೧ ರಂದು ಎರಡು ದಿನದ ಕಾರ್ಯಾಗಾರವನ್ನು ೧ ರಿಂದ ೪ನೇ ತರಗತಿಯ ಪಾಲಕರಿಗೆ ಹಾಗೂ ಶಿಕ್ಷಕರಿಗೆ ಏರ್ಪಡಿಸಲಾಗಿತ್ತು. ಮುಂಬಯಿಯಲ್ಲಿ ಇಂಜಿನಿಯರ ಆಗಿ ಕಾರ್ಯ ನಿರ್ವಹಿಸುತ್ತಿದ್ದ ಶ್ರೀ.ಆಮೋದ್ ಕಾರ್ಖಾನಿಸ್ ಇವರು ಗಣಿತದ ಬಗ್ಗೆ ಹೆಚ್ಚು ಆಸಕ್ತಿ ಇದ್ದುದಕ್ಕಾಗಿ ಆ ಕೆಲಸವನ್ನು ಬಿಟ್ಟು, ಮಕ್ಕಳಿಗೆ ಹೇಗೆ ಗಣಿತವನ್ನು ಸರಳವಾಗಿ, ಮನಮುಟ್ಟುವಂತೆ, ಸ್ವಾರಸ್ಯಮಯವಾಗಿ ತಿಳಿಸಿಕೊಡಬೇಕೆಂದು ವಿಚಾರಿಸಿ ಹೆಚ್ಚಿನ ಅಭ್ಯಾಸ ಮಾಡಿದರು. ಶಿಕ್ಷಕರಿಗೆ ಹಾಗೂ ಪಾಲಕರಿಗೆ ಕಾರ್ಯಾಗಾರ ಮಾಡಿದರೆ ಅದು ಮಕ್ಕಳಿಗೆ ಸುಲಭವಾಗಿ ಮುಟ್ಟುತ್ತದೆ ಎಂಬುದು ಅವರ ಉದ್ದೇಶ.


ಸಂಖ್ಯೆಗಳು ಅಮೂರ್ತವಾದದ್ದು. ನಾವು ಹೆಚ್ಚಾಗಿ ಮಕ್ಕಳಿಗೆ ಸಂಖ್ಯೆಗಳನ್ನು ನೇರವಾಗಿ ಕಲಿಸಿಕೊಡದೇ ಮೂರ್ತದಿಂದ ಅಮೂರ್ತದ ಕಡೆಗೆ ಹೋಗಬೇಕು. ಮೊದಲು ಚಿತ್ರಗಳ ಮೂಲಕ, ವಸ್ತುಗಳ ಮೂಲಕ, ಹಾಡು ಚಟುವಟಿಕೆ ಹಾಗೂ ಆಟಗಳನ್ನು ಆಡಿಸುವುದರ ಮೂಲಕ ಸಂಖ್ಯೆಗಳ ಪರಿಕಲ್ಪನೆ ಮಾಡಿಸಬೇಕಾಗುತ್ತದೆ. ನಂತರ ಬರೆಯಲು ಹೇಳಬೇಕು.

ಹೀಗೆ ಅನೇಕ ಚಟುವಟಿಕೆಗಳ ಮೂಲಕ ದೊಡ್ಡ ಸಂಖ್ಯೆ, ಸಣ್ಣ ಸಂಖ್ಯೆ, ಏರಿಕೆ ಕ್ರಮ, ಇಳಿಕೆ ಕ್ರಮ, ಕೂಡಿಸುವ, ಕಳೆಯುವ ಲೆಕ್ಕ, ಸ್ಥಾನದ ಪರಿಕಲ್ಪನೆ ಇವೆಲ್ಲ ವಿಷಯಗಳನ್ನು ಸುಲಭವಾಗಿ ತಿಳಿಸಿಕೊಟ್ಟರು.

ಒಟ್ಟಾರೆ ಗಣಿತವನ್ನು ಅಡಿಪಾಯದಿಂದ ಅನುಭವಾತ್ಮಕವಾಗಿ, ಆಕರ್ಷಕವಾಗಿ, ಆಸಕ್ತಿದಾಯಕವಾಗಿ ಆಟವಾಡುತ್ತಾ ಕಲಿಸುತ್ತಾ ಹೋದರೆ, ಅದರ ಬಗ್ಗೆ ಭಯ ಹುಟ್ಟಲು ಹೇಗೆ ಸಾಧ್ಯ?!

**ಸಹನಾ ಮುತಾಲಿಕ್ ನಾಡಗೌಡ**

**ಶಿಕ್ಷಕಿ**



# ಕನ್ನಡ ಭಾಷೆಯ ಸ್ಪಷ್ಟತೆ ಹಾಗೂ ಶುದ್ಧವಾದ ಸುಂದರವಾದ ಬರವಣಿಗೆ

ದಿನಾಂಕ ೧೦/೧೨/೧೪ ರಂದು ಬಾಲಬಳಗ ಶಾಲೆಯಲ್ಲಿ ಕನ್ನಡ ಭಾಷೆಯ ಸ್ಪಷ್ಟತೆ ಹಾಗೂ ಶುದ್ಧವಾದ, ಸುಂದರವಾದ ಬರವಣಿಗೆಯ ಕುರಿತು ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿತ್ತು.

ಡಾ. ಜಯಶ್ರೀ ಮುದಿಗೌಡರ (ನಿವೃತ್ತ ಶಿಕ್ಷಕಿ) ಅವರು ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿ ಕಾರ್ಯಾಗಾರವನ್ನು ಯಶಸ್ವಿಯಾಗಿ ನೆರವೇರಿಸಿಕೊಟ್ಟರು.

ಮೊದಲಿಗೆ ಮಾತೃಭಾಷೆಯ ಮಹತ್ವದ ಬಗ್ಗೆ ಮಾತನಾಡಿದ ಅವರು ಮಗು ಪ್ರಾಥಮಿಕ ಶಿಕ್ಷಣ ಕನ್ನಡ ಮಾಧ್ಯಮದಲ್ಲಿ ಕಲಿಯುವುದು ಅವಶ್ಯಕ ಮತ್ತು ಸೂಕ್ತ. ಮಾತೃಭಾಷೆಯಲ್ಲಿ ಮಗು ಅರ್ಥಮಾಡಿಕೊಂಡು ಇಷ್ಟಪಟ್ಟು ಆಸಕ್ತಿಯಿಂದ ಕಲಿಯುತ್ತದೆ. 'ಕಲಿಕೆ' ಎನ್ನುವುದು ಆಸಕ್ತಿ ಮೂಡಿಸುವುದಾಗಿರಬೇಕೆ ಹೊರತು ಆಸಕ್ತಿಯನ್ನು ಮೊಟಕುಗೊಳಿಸಬಾರದು. ಮಗುವಿನಲ್ಲಿ ಸುಪ್ತವಾಗಿ ಅಡಗಿರುವ ಪ್ರತಿಭೆಯನ್ನು ಗುರುತಿಸಿ ಬೆಳೆಸಬೇಕು. ಅದು ನಿಜವಾದ ನೈಜ ಕಲಿಕೆಯಾಗುತ್ತದೆ.

ಅಡಿಪಾಯ ಗಟ್ಟಿಯಾಗಿದ್ದರೆ ಮಾತ್ರ ಅದರ ಮೇಲೆ ೧೦೦ ಸೌಧಗಳನ್ನು ಕಟ್ಟಬಹುದು. ಪ್ರಾಥಮಿಕ ಶಿಕ್ಷಣವು ಮಗುವಿನ ಬುನಾದಿ ಇದ್ದಂತೆ, ಇದು ಗಟ್ಟಿಯಾಗಿದ್ದರೆ ಮಾತ್ರ ಮಗುವಿನ ಉಜ್ವಲ ಭವಿಷ್ಯ ಸಾಧ್ಯ. ಕನಿಷ್ಟ ೭ನೇ ತರಗತಿಯವರೆಗೆ ಮಗು ತನ್ನ ಮಾತೃಭಾಷೆಯಲ್ಲಿ ಶಿಕ್ಷಣ ಪಡೆಯಬೇಕು ಎಂದು ಇಂಗ್ಲೀಷ ವ್ಯಾಮೋಹಕ್ಕೆ ಒಳಗಾಗಿರುವ ತಾಯಿ-ತಂದೆಯವರಿಗೆ ಕಿವಿಮಾತುಗಳನ್ನು ಹೇಳಿದರು.

ಕನ್ನಡ ಧ್ವನಿತ ಭಾಷೆ, ಅಂದಂತೆ ಬರೆಯುವ ಭಾಷೆ. ಇದನ್ನು ಸರಳವಾಗಿ ಮತ್ತು ಮಕ್ಕಳಿಗೆ ಆಸಕ್ತಿ ಮೂಡುವ ರೀತಿಯಲ್ಲಿ ಹೇಗೆ ಕಲಿಸಬೇಕು ಎಂಬುದನ್ನು ಡಾ. ಜಯಶ್ರೀ ಮುದಿಗೌಡರ ಅವರು ತಮ್ಮ ವೃತ್ತಿಜೀವನದಲ್ಲಿ ಮಾಡಿದ ಪ್ರಯತ್ನ, ಸಾಧನೆ ಹಾಗೂ ತಮ್ಮ ಅತ್ಯಮೂಲ್ಯ ಅನುಭವಗಳನ್ನು ಎಲ್ಲರೊಂದಿಗೆ ಹಂಚಿಕೊಂಡರು.

ಮಕ್ಕಳು ಅತ್ಯಂತ ಚಂಚಲ ಸ್ವಭಾವದವರಾಗಿತ್ತಾರೆ. ಅವರ ಮನಸ್ಸನ್ನು ಒಂದುಕಡೆ ಹಿಡಿದಿಡುವುದು ಕಷ್ಟಸಾಧ್ಯ. ಪಾಲಕರು ಮಕ್ಕಳಿಗೆ ಅಭ್ಯಾಸ ಮಾಡಿಸಲು ದುಂಬಾಲು ಬೀಳಬೇಕಾಗಿದೆ. ಅಥವಾ ಮಕ್ಕಳನ್ನು ಗೃಹಪಾಠಗಳಿಗೆ ಕಳಿಸಬೇಕಾಗುತ್ತದೆ.

ಇಂತಹ ಸಂಕೀರ್ಣ ಸ್ಥಿತಿಯನ್ನು ಅನುಭವಿಸುವ ಪಾಲಕರಿಗೆ ಕೆಲವೊಂದು ಸಲಹೆಗಳನ್ನು ಕೊಟ್ಟರು. ಮಗುವಿಗೆ ಅಭ್ಯಾಸದಲ್ಲಿ ಆಸಕ್ತಿ ಮೂಡುವ ರೀತಿಯಲ್ಲಿ ಆಟದೊಂದಿಗೆ ಪಾಠವನ್ನು ಹೇಳಿಕೊಡಬೇಕು.

ತಂದೆ-ತಾಯಿಗಳು ಮಗುವಿನ ಜೊತೆಗೆ ಪ್ರತಿದಿನ ಕನಿಷ್ಟ ಅರ್ಧಘಂಟೆಯಾದರೂ ಮೀಸಲಿಡಬೇಕು. ಮಕ್ಕಳಿಗೆ ಹೊಸದನ್ನು ಕಲಿಯುವ ತಿಳಿದುಕೊಳ್ಳುವ ಸ್ವಭಾವ ಇರುವುದರಿಂದ ಮಗುವಿನ ಈ ಮನಸ್ಥಿತಿಯನ್ನು ಅರ್ಥಮಾಡಿಕೊಂಡು ಕಲಿಕೆಯಲ್ಲಿ ಹೊಸತನ್ನು ಕೊಡಬೇಕು. ಅದನ್ನು ಬಿಟ್ಟು ಬರೆದಿದ್ದನ್ನು ಮತ್ತೆ ಮತ್ತೆ ಹತ್ತು ಸಲ ಇಪ್ಪತ್ತು ಸಲ ಬರಿ ಎಂದರೆ ಮಗುವಿಗೆ ಬೇಸರವಾಗುತ್ತದೆ. ಮಕ್ಕಳಿಗೆ ಅಭ್ಯಾಸ ಎನ್ನುವುದು ಹೊರೆಯಾಗುತ್ತದೆ.

ಮಕ್ಕಳನ್ನು ಯಾವುದೇ ಕಾರಣಕ್ಕೂ ದಡ್ಡ, ನಿನಗೆ ಬರುವುದಿಲ್ಲ ಎಂಬ ಕೀಳರಿಮೆ ಮೂಡಿಸಬಾರದು. ಮಕ್ಕಳು ಒಂದು ಸಲ ಆಸಕ್ತಿ ಕಳೆದುಕೊಂಡರೆ ಮತ್ತೆ ಅಭಿರುಚಿ ಮೂಡಿಸುವುದು ಪ್ರವಾಹದ ವಿರುದ್ಧ ಈಜುವಂತಾಗುತ್ತದೆ ಎನ್ನುವ ಮುನ್ನೆಚ್ಚರಿಕೆಯ ಸಲಹೆಯನ್ನು ನೀಡಿದರು.

ಮಗುವಿನ ಸರ್ವಾಂಗೀಣ ಬೆಳವಣಿಗೆಗಾಗಿ ಪಾಲಕರು ಹಾಗೂ ಶಿಕ್ಷಕರ ಪಾತ್ರ ಮಹತ್ವದ್ದಾಗಿದೆ. ಶಿಕ್ಷಕರು ಅತಿಯಾಗಿ ಸ್ಟ್ರಿಕ್ಟಾಗಿ ವರ್ತಿಸದೆ ಮಗುವಿನ ಬಗ್ಗೆ ಕಾಳಜಿ ವಹಿಸಿ ಆತ್ಮೀಯ ಮನೋಭಾವನೆ ಹೊಂದಿರಬೇಕು. ಕಲಿಕೆಯಲ್ಲಿ ಹಿಂದಿರುವ ಮಕ್ಕಳ ಬಗ್ಗೆ ವಿಶೇಷ ಕಾಳಜಿ ಇರಬೇಕು. ಬೇರೆ-ಬೇರೆ ಕಲಿಕಾವಿಧಾನಗಳನ್ನು ಅಳವಡಿಸಿಕೊಂಡು ಹಂತಹಂತವಾಗಿ ಕಲಿಸುತ್ತಾ ಹೋಗಬೇಕು. ಅವಸರ ಮಾಡದೇ ಹಿಂದಿನ ಸಾಮರ್ಥ್ಯ ಪಡೆದಮೇಲೆ ಮುಂದಕ್ಕೆ ಹೋಗಬೇಕು.

ಆಟದೊಂದಿಗೆ ಪಾಠ ಹೇಳುವ ವಿಧಾನವನ್ನು ಅಳವಡಿಸಿಕೊಂಡು ಅದಕ್ಕೆ ಬೇಕಾದ ತಯಾರಿಯನ್ನು ಶಿಕ್ಷಕರು ಮಾಡಿಕೊಂಡಿರಬೇಕು ಎಂಬ ಸೂಕ್ಷ್ಮ ವಿಚಾರವನ್ನು ತಮ್ಮ ತಿಳಿಯಾದ ಮಾತುಗಳಿಂದ ತಿಳುವಳಿಕೆ ನೀಡಿದರು.

ಅನೇಕ ಚಟುವಟಿಕೆಗಳ ಮುಖಾಂತರ ಕಲಿಸುವುದು ಹೇಗೆ ಎಂಬುದನ್ನು ಪ್ರಾಯೋಗಿಕವಾಗಿ ಮನವರಿಕೆ ಮಾಡಿಸಿದರು.

೧. ಮೂಲಾಕ್ಷರಗಳನ್ನು ಕಲಿಸಲು ಅಕ್ಷರ ಮತ್ತು ಚಿತ್ರ ತೋರಿಸುವುದು ನಂತರ ಅಕ್ಷರಕ್ಕೆ ಚಿತ್ರ ಹೊಂದಿಸಲು ಹೇಳುವುದು.

೨. ಅಕ್ಷರಗಳ ಮಿಂಚುಪಟ್ಟಿ ತಯಾರಿಸಿ ಜೋಡಿಸಲು ಕೊಡುವುದು.

೩. ಅಕ್ಷರಗಳ ಮೇಲೆ ಹುಣಿಸೆಬೀಜಗಳನ್ನು ಇಡುವುದು.

೪. ದಾಳಕ್ಕೆ ಅಕ್ಷರಗಳನ್ನು ಅಂಟಿಸಿ ಆಟ ಆಡುತ್ತ ಅಕ್ಷರ ಗುರುತಿಸುವುದು.

೫. ಬಣ್ಣ ಬಣ್ಣದ ಪೆನ್ಸಿಲಗಳಿಂದ ಅಕ್ಷರ ಬರೆಯುವುದು. ಚಿತ್ರಗಳನ್ನು ಬರೆದು ಅಂಕಿಗಳನ್ನು ಬರೆಯಲು ಹೇಳುವುದು.

೬. ಐಸ್ ಕ್ರೀಮ್ ಕಡ್ಡಿಗಳಲ್ಲಿ ಅಕ್ಷರಗಳನ್ನು ಬರೆದು ಪದ ಮಾಡಲು ಹೇಳುವುದು.

೭. ಆ, ಪ, ಟ, ಉ, ಓ ಈ ಅಕ್ಷರಗಳಿಂದ ಪದ ರಚಿಸುವುದು.

ಮಕ್ಕಳ ಎರಡು ಗುಂಪುಗಳ ಮಧ್ಯ ಹರಡಿದ ಅಕ್ಷರಗಳ ಕಾರ್ಡುಗಳಿಂದ ಹೇಳಿದ ಅಕ್ಷರದ ಕಾರ್ಡನ್ನು ಆಯ್ದು ಬೇಗನೆ ತಂದು ಕೊಡುವ ಆಟ ಆಡಿಸುವುದು ಇತ್ಯಾದಿ ಅನೇಕ ಚಟುವಟಿಕೆಗಳ ಮುಖಾಂತರ ಮಕ್ಕಳಿಗೆ ಆಟದೊಂದಿಗೆ ಪಾಠ ಹೇಗೆ ಮಾಡಿಸಬೇಕೆಂಬುದನ್ನು ಪಾಲಕರಿಗೂ ಹಾಗೂ ಶಿಕ್ಷಕರಿಗೂ ಮನವರಿಕೆ ಮಾಡಿಕೊಟ್ಟರು.


ಪಾಲಕರು ತಮ್ಮ ತಮ್ಮ ಮಕ್ಕಳ ಕಲಿಕಾನ್ಯೂನ್ಯತೆಗಳ ಬಗ್ಗೆ ಡಾ. ಜಯಶ್ರೀ ಮುದಿಗೌಡರ ಅವರ ಬಳಿ ಚರ್ಚಿಸಿ ಪರಿಹಾರವನ್ನು ತಿಳಿದುಕೊಂಡರು.

"ಮಕ್ಕಳಿಗೆ ಮನೆಯೇ ಮೊದಲ ಪಾಠಶಾಲೆ. ತಾಯಿಯೇ ಮೊದಲ ಗುರು" ಎಂಬ ನಾಣ್ಣುಡಿಯಂತೆ ತಾಯಂದಿರಿಗಾಗಿ ಉಚಿತ ತರಬೇತಿ ನೀಡುವುದಾಗಿ ಹೇಳಿದರು.

ಡಾ. ಜಯಶ್ರೀ ಮುದಿಗೌಡರ ಅವರು ವೃತ್ತಿಯಿಂದ ನಿವೃತ್ತರಾದರೂ ಪ್ರವೃತ್ತಿಯಲ್ಲಿ ಚೈತನ್ಯಶೀಲರಾಗಿದ್ದಾರೆ. ಭಾಷೆಯ ಬಗ್ಗೆ ಪ್ರೀತಿ ಮಿಡಿತ ಹೊಂದಿದ್ದಾರೆ.

ತಮ್ಮ ಅನುಭವದ ಪುಂಜವನ್ನು ಮಾರ್ಗದರ್ಶಿಯಾಗಿ ಧಾರೆ ಎರೆಯುವ ನಿಸ್ವಾರ್ಥ ಸೇವಾ ಮನೋಭಾವದಿಂದ ಸಮಾಜೋನ್ಮುಖಿ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಅನೇಕ ಕಾರ್ಯಾಗಾರಗಳ ಮೂಲಕ ಮಕ್ಕಳ ಶೈಕ್ಷಣಿಕ ಬೆಳವಣಿಗೆಗಾಗಿ ನಿರಂತರ ಶ್ರಮಿಸುತ್ತಿದ್ದಾರೆ.

ಸುನಿತಾ ಕೋರಿಶೆಟ್ಟಿ
ಶಿಕ್ಷಕಿ



## ಹಿರಿಯರೊಂದಿಗೆ ಮಕ್ಕಳ ಸಂವಾದ (ಚಿಕ್ಕ ವರದಿ)

ದಿನಾಂಕ ೨೮/೧೨/೨೦೧೪ ರಂದು ನಾವು ರಂಗಾಯಣದ 'ಸುವರ್ಣ ಸಮುಚ್ಚಯ' ಭವನದಲ್ಲಿ 'ಹಿರಿಯರೊಂದಿಗೆ ಮಕ್ಕಳ ಸಂವಾದ'ದಲ್ಲಿ ಭಾಗವಹಿಸಿದ್ದೆವು.
ವಿಷಯ: ಸ್ವಚ್ಛತೆಯಿಂದ ಆರೋಗ್ಯದ ಕಡೆಗೆ
ನಾವು ಸಂವಾದವನ್ನು ಪ್ರಾರಂಭಿಸಿದಾಗ ನಮಗೆ ಸಂವಾದ ಎಂದರೆ ಸಾಧಾರಣವಾಗಿ ಸ್ವಲ್ಪ ಮಾತುಗಳನ್ನು ಆಡುತ್ತಾರೆ, ನಾವೂ ಸ್ವಲ್ಪ ಪ್ರಶ್ನೆಗಳನ್ನು ಕೇಳಿ ಸುಮ್ಮನೆ ಕೂಡುವುದು ಅಂದುಕೊಂಡಿದ್ದೆವು. ಆದರೆ ಅಲ್ಲಿ ಎಲ್ಲ ಗಣ್ಯ ವ್ಯಕ್ತಿಗಳು 'ಮಕ್ಕಳ ಆರೋಗ್ಯದ ರಕ್ಷಣೆ', 'ಶಾಲೆಯಲ್ಲಿ ಸ್ವಚ್ಛತೆ', ಮನೆಮನೆಗಳಲ್ಲಿ ಸ್ವಚ್ಛತೆ ಮತ್ತು ಆರೋಗ್ಯ', 'ಸ್ಥಳೀಯ ಆಡಳಿತದ ಸ್ವಚ್ಛತೆಯ ನಿರ್ವಹಣೆ', 'ಮಾಧ್ಯಮಗಳಲ್ಲಿ ಸ್ವಚ್ಛತೆಯ ಪಾತ್ರ'- ಈ ವಿಷಯಗಳ ಬಗ್ಗೆ ತುಂಬಾ ಚೆನ್ನಾಗಿ ಮಾತನಾಡಿದರು. ಈ ವಿಷಯಗಳ ಮೊದಲು ಎಲ್ಲರೂ ಸಾಮಾನ್ಯವಾಗಿ ಮಾತನಾಡುವಂತಿದ್ದವು. ಆಮೇಲೆ ಆ ವಿಷಯಗಳು ಸಾಣಿಸಿ ತೆಗೆದು-ತೆಗೆದು ಶುದ್ಧ ಮಾಡಿ ಒಳ್ಳೆಯ ತೀರ್ಮಾನಗಳಿಗೆ ಅಥವಾ ಒಳ್ಳೆಯ ನಿರ್ಧಾರಗಳಿಗೆ ಬರುವುದಕ್ಕೆ ದಾರಿ ಮಾಡಿಕೊಟ್ಟವು.
ವಿದಾರ್ಥಿಗಳ ಎಲ್ಲ ಪ್ರಶ್ನೆಗಳಿಗೆ ಹಿರಿಯರು ತಕ್ಕ ಹಾಗೂ ಮಕ್ಕಳಿಗೆ ತೃಪ್ತಿಯಾಗುವ ಉತ್ತರಗಳನ್ನಿಟ್ಟರು. ಕೆಲವು ಪ್ರಶ್ನೆಗಳು ಹಿರಿಯರಿಗೆ ಬೆರಗಾಗುವ ಹಾಗೂ ಉತ್ತರಗಳನ್ನು ನೀಡಲಾಗದ ಒಳ್ಳೆಯ ಪ್ರಶ್ನೆಗಳಾಗಿದ್ದವು. ನಮಗೆ ಹಿರಿಯರು ಉದಾಹರಣೆಗಳ ಸಹಿತ ಉತ್ತರ ನೀಡಿದರು. ಅವು ನಮಗೆ ಮನದಟ್ಟಾದವು.
ಒಟ್ಟಿನಲ್ಲಿ ಸಂವಾದ ನಮಗೆ ಹಿಡಿಸಿತು.

ಶ್ರೀಹರ್ಷ
೬ ನೇ ತರಗತಿ

## ಪಾಲಕರ ಕಾರ್ಯಾಗಾರ

ಶ್ರೀಮತಿ ಜಯಶ್ರೀ ಅವರು ದಿನಾಂಕ ೧೦/೧೨/೧೪ ರಂದು ಕನ್ನಡ ಭಾಷೆಯ ಅಕ್ಷರಗಳ ಕಲಿಕೆ ಬಗ್ಗೆ ಕಾರ್ಯಗಾರ ಮಾಡಿದರು. ಶಿಶುವಿಹಾರ ಹಾಗೂ ಪ್ರಾಥಮಿಕ ತರಗತಿಯ ಮಕ್ಕಳ ಪಾಲಕರಿಗಾಗಿ ಇದನ್ನು ಮಾಡಲಾಗಿತ್ತು.
ಶ್ರೀಮತಿ ಜಯಶ್ರೀಯವರು ಮೊದಲಿಗೆ ಕನ್ನಡ ಭಾಷೆಯ ಮಹತ್ವ ಅದರ ಸುಂದರತೆಯ ಬಗ್ಗೆ ಮಾತನಾಡಿದರು. ಮಾತೃಭಾಷೆಯಲ್ಲಿ ಕಲಿತರೆ, ಮುಂದಿನ ತರಗತಿಗಳಲ್ಲಿ ಮಕ್ಕಳು ಸ್ವಾವಲಂಬನೆಯನ್ನು (ತಾವೇ ಓದಿಕೊಳ್ಳುವುದನ್ನು) ರೂಢಿಸಿಕೊಳ್ಳುತ್ತಾರೆ ಎಂದರು.
ಜಯಶ್ರೀಯವರು ಅಕ್ಷರ ಜ್ಞಾನವೇ ಇಲ್ಲದಿರುವ ಎಳೆ ಮಕ್ಕಳಿಗೆ ಒಲವಿನಿಂದ, ಬುದ್ಧಿವಂತಿಕೆಯಿಂದ, ಸುಲಭವಾಗಿ ಸ್ವರಗಳನ್ನು, ವ್ಯಂಜನಗಳನ್ನು ಹೇಳಿಕೊಡುವ ವಿಧಾನಗಳನ್ನು ತಿಳಿಸಿದರು. ಚಿತ್ರಗಳ ಹಾಗೂ ಆಟಗಳ ಮೂಲಕ ಮಕ್ಕಳು ಆಸಕ್ತಿ ವಹಿಸುವಂತೆ ಮಾಡಿ ಸ್ವರ ವ್ಯಂಜನಗಳನ್ನು ಕಲಿಸುವುದನ್ನು ತಿಳಿಸಿದರು.
ಅವರು ದೀರ್ಘಾವದಿ ಶಿಕ್ಷಕಿಯಾಗಿ, ತಾಯಿಯಾಗಿ, ಅಜ್ಜಿಯಾಗಿ ಪಡೆದ ಅನುಭವಗಳನ್ನು ಮನ ಕಲುಕುವಂತೆ ಹೇಳಿದರು. ಒಟ್ಟಾರೆ ಕನ್ನಡ ಭಾಷೆ ಕಲಿಕೆ ಬಗ್ಗೆ ಬಹಳಷ್ಟು ಮಾಹಿತಿಗಳು ಲಭ್ಯವಾದವು.

ಡಾ. ಶರ್ಮಿಳಾ
ಪಾಲಕರು

# ರಂಗಾಯಣದಲ್ಲಿ ಪುಟ್ಟ ಪುಟ್ಟ 'ಕವಿ, ಕವಯಿತ್ರಿಯರು'

ಧಾರವಾಡ: ದಿ: ೨೬ ರಂದು ಎಲ್ಲ ಶಾಲೆಯ ಪುಟ್ಟ ಪುಟ್ಟ ಕವಿ ಕವಯಿತ್ರಿಯರು ರಂಗಾಯಣದಲ್ಲಿ ಸೇರಿದ್ದರು. ತಮ್ಮ ಸುಂದರ ಕವನಗಳನ್ನು ಓದಲು ತುದಿಗಾಲಲ್ಲಿ ನಿಂತಿದ್ದರು. ಅಂದು ಅಲ್ಲಿ ಪುಟ್ಟ ಮಕ್ಕಳ ಕವಿಗೋಷ್ಠಿ ಇತ್ತು. ಹೆಚ್ಚು ಕಡಿಮೆ ೨೫ ಮಕ್ಕಳು ಕವಿಗೋಷ್ಠಿಯಲ್ಲಿ ಭಾಗವಹಿಸಿದ್ದರು. ಮತ್ತೊಂದು ವಿಶೇಷ ಏನೆಂದರೆ ಅಲ್ಲಿ ಭಾಗವಹಿಸಲು ಬಂದ ಮಕ್ಕಳಿಗೇ ಆ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿಕೊಡಲಾಗಿತ್ತು. ಅಂದಿನ ಅಧ್ಯಕ್ಷತೆಯನ್ನು ಪೂಜಾ ಗರಗದ ವಹಿಸಿಕೊಂಡಿದ್ದರು. ಕಾರ್ಯಕ್ರಮದ ಉದ್ಘಾಟನೆಯನ್ನು ಬಹಳ ವಿಶೇಷ ರೀತಿಯಲ್ಲಿ ಮಾಡಲಾಗಿತ್ತು. ಎಲ್ಲರೂ ಜ್ಯೋತಿ ಬೆಳಗಿಸಿದರೆ ಅಂದು ತಮಟೆ ಬಾರಿಸಿದರು. ಉದ್ಘಾಟನೆಯನ್ನು ಅಧಕ್ಷೆ ಪೂಜಾ ಗರಗದ ಮಾಡಿದಳು.

ನಂತರ ಕವಿಗೋಷ್ಠಿ ಪ್ರಾರಂಭವಾಯಿತು. ಮಕ್ಕಳು ಒಬ್ಬೊಬ್ಬರೇ ಬಂದು ತಮ್ಮ ಕವನಗಳನ್ನು ಓದಿ ಹೋದರು. ಮೊದಲು ಅಕ್ಷತಾ ಅವರು ಬಂದು ತಮ್ಮ ಕವನಗಳನ್ನು ಓದಿದರು. ಅವರು ಬೆಳಕಿನ ಬಗ್ಗೆ ಬರೆದಿದ್ದರು. ಹೀಗೆ ಒಬ್ಬೊಬ್ಬರೇ ಬಂದು ಓದಿದರು. ನೀಲಮ್ಮಾ ಅವರು ಗೆಳೆತನದ ಬಗ್ಗೆ ಬರೆದ ಕವನ ಓದಿದರು. ಕೆಲವರು ಚುಟುಕುಗಳನ್ನು ಬರೆದಿದ್ದರು. ಇನ್ನೂ ಕೆಲವರು ನಿಸರ್ಗದ ಬಗ್ಗೆ ಮತ್ತೆ ಕೆಲವರು ಹೆಣ್ಣಿನ ಬಗ್ಗೆ ಕವನಗಳನ್ನು ಬರೆದಿದ್ದರು. ಶ್ರೇಯಸಿ ಹಿಂದಿಯಲ್ಲಿ ಅಮ್ಮನ ಬಗ್ಗೆ ತಾನೇ ರಚಿಸಿದ ಕವನಗಳನ್ನು ಎಲ್ಲರ ಮನಮುಟ್ಟುವ ಹಾಗೆ ಹೇಳಿದಳು. ವಿಶಾಲಾಕ್ಷಿಯವರು ಮಕ್ಕಳು ರಚಿಸಿದ ಕವನಗಳನ್ನು ರಾಗಬದ್ಧವಾಗಿ ಹಾಡಿದರು.

"ನಾನು ಮೊಟ್ಟ ಮೊದಲು ಧಾರವಾಡ ಜಿಲ್ಲಾ ಉತ್ಸವದ ಮಕ್ಕಳ ಸಮಿತಿಗೆ ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ಏಕೆಂದರೆ ನಮ್ಮನ್ನು ಮಕ್ಕಳೆಂದು ಕಡೆಗಣಿಸದೇ ನಮಗೂ ಒಂದು ಅವಕಾಶ ಕಲ್ಪಿಸಿಕೊಟ್ಟಿದ್ದಾರೆ. ವಿಶೇಷವಾಗಿ ಈ ಕವಿಗೋಷ್ಠಿಯ ಅಧ್ಯಕ್ಷತೆಯನ್ನು ನನಗೆವಹಿಸಿದ್ದಾರೆ."

ಅಂದು ನನ್ನಂತೆ ಕವಿತೆಗಳನ್ನು ಎಲ್ಲರೂ ಬರೆದುಕೊಂಡು ಬಂದಿದ್ದರು. ಎಲ್ಲರೂ ಚೆನ್ನಾಗಿ ಓದಿದರು. ಒಂದಕ್ಕಿಂತ ಒಂದು ಸುಂದರವಾಗಿದ್ದವು.

"ಕವಿಗಳು ಯಾವಾಗಲೂ ನಿರೀಕ್ಷಣೆ ಮಾಡುವ ಸ್ವಭಾವ ಹೊಂದಿರಬೇಕು, ಅವರು ಕಲ್ಪನಾಲೋಕದಲ್ಲಿ ತೇಲುತ್ತಿರಬೇಕು. ಕವಿತೆಗಳ ವಿಷಯ ಸಿಕ್ಕಾಗ ಅದನ್ನು ತಕ್ಷಣ ಬರೆದಿಟ್ಟುಕೊಳ್ಳಬೇಕು. ಹಿರಿಯರು ಬರೆದ ಕವಿತೆಗಳನ್ನು ಓದಬೇಕು. ಹೆಚ್ಚು ಹೆಚ್ಚು ಪುಸ್ತಕಗಳನ್ನು ಓದಬೇಕು. ಸ್ವತಃ ನಾವೇ ಬರೆದ ಕವನಗಳನ್ನು ಓದಲು ನಾವು ಹಿಂಜರಿಯಬಾರದು". ಹೀಗೆಂದು ಅಂದಿನ ಕಾರ್ಯಕ್ರಮದ ಅಧ್ಯಕ್ಷೆ ಪೂಜಾ ಗರಗದ ಭಾಷಣದಲ್ಲಿ ನುಡಿದರು. ನಂತರ ತಾವು ರಚಿಸಿದ ಕವಿತೆ ಓದಿದರು. ನಂತರ ಸಮಿತಿಯವರು ಪುಸ್ತಕಗಳನ್ನು ನೀಡಿ ಕಾರ್ಯಕ್ರಮವನ್ನು ಮುಕ್ತಾಯಗೊಳಿಸಿದರು.

ಪೂಜಾ ಗರಗದ
೧೦ ನೇ ತರಗತಿ



# ಸಕ್ರಿಯ ಪೌರಪ್ರಜ್ಞೆ

ದೇಶದ ತುಂಬೆಲ್ಲಾ ಈಗ ಸ್ವಚ್ಛತೆಯ ಗಾಳಿ ಬೀಸುತ್ತಿದೆ- ಸ್ವಚ್ಛತಾ ಆಂದೋಲನದ ಗಾಳಿ. ಪತ್ರಿಕೆಗಳಲ್ಲಿ, ಟಿವಿಯಲ್ಲಿ ದಿನನಿತ್ಯವೂ ಪ್ರಸಿದ್ಧ ವ್ಯಕ್ತಿಗಳು ಕಸಬರಿಗೆ ಹಿಡಿದುಕೊಂಡು ರಸ್ತೆ ಸ್ವಚ್ಛ ಮಾಡುವ ದೃಶ್ಯಗಳು ಪ್ರಸಾರಗೊಳ್ಳುತ್ತಲೇ ಇವೆ. ಆದರೆ ಧಾರವಾಡದಲ್ಲಿ ಮಾತ್ರ ಯಾವ ಬದಲಾವಣೆಯೂ ಕಾಣುತ್ತಿಲ್ಲ. ತುಂಬಿ ತುಳುಕುತ್ತಿರುವ ತಿಪ್ಪೆಗಳು, ಪ್ಲಾಸ್ಟಿಕ್ ತುಂಬಿದ ಗಟಾರುಗಳು, ಅಲ್ಲಲ್ಲಿ ಕಸವನ್ನು ಗುಂಪು ಹಾಕಿ ಅದಕ್ಕೆ ಬೆಂಕಿ ಹಚ್ಚುವ ನಗರಸಭೆ ಕಾರ್ಮಿಕರು ಇವೆಲ್ಲಕ್ಕೆ ಕಿರೀಟಪ್ರಾಯವಾಗಿ ಮೆರೆಯುವ ಹಂದಿಗಳು-ಇವೆಲ್ಲವೂ ದಿನನಿತ್ಯದ ನೋಟಗಳು.

ಇದರ ಅರ್ಥ ಸ್ವಚ್ಛತೆಯ ಕೆಲಸ ನಡದೇ ಇಲ್ಲ ಎಂದಲ್ಲ. ನಡೆದಿದೆ ಆದರೆ ತೀರ ಅಸಮರ್ಪಕವಾಗಿ. ಎರಡು ದಿನಗಳಿಗೊಮ್ಮೆ ಸ್ವಚವಾಗಬೇಕಾದ ತಿಪ್ಪೆಗುಂಡಿ ಹತ್ತು ದಿನಗಳಿಗೊಮ್ಮೆ ಸ್ವಚ್ಛವಾಗುತ್ತಿದೆ.

ಸ್ನೇಹಿತರೊಂದಿಗೆ ಇದರ ಬಗ್ಗೆ ಚರ್ಚಿಸುತ್ತಿದ್ದಾಗ ಅನೇಕ ಪ್ರಶ್ನೆಗಳು ಎದ್ದು ಬಂದವು. ಆರು ಜನ ಪ್ರಸಿದ್ಧ ವ್ಯಕ್ತಿಗಳು ಒಂದು ಉದ್ದನೆಯ ಕಸಬರಿಗೆ ಹಿಡಿದು ಕಸಬಳಿಯುತ್ತಿರುವ ದೃಶ್ಯ ಟಿವಿಯಲ್ಲಿ ಬರುತ್ತದೆ. ಯಾಕೆ ನಾವು ಹೀಗೆ ಎಲ್ಲವನ್ನೂ ಪ್ರಹಸನವಾಗಿಸಿಬಿಡುತ್ತೇವೆ? ರಸ್ತೆ ಮೂಲೆಯ ಕಸಕ್ಕೂ ನಮ್ಮ ಶಿಕ್ಷಣಕ್ಕೂ ಏನು ಸಂಬಂಧ? ರಸ್ತೆ ಬದಿಯ ಕಸವನ್ನು ಸುಡಬಾರದು ಎಂದು ಕಾನೂನು ಇರುವಾಗಲೂ ಯಾಕೆ ಪೌರ ಕಾರ್ಮಿಕರು ದಿನನಿತ್ಯ ರಾಜಾರೋಷವಾಗಿ ಅದನ್ನು ಸುಡುತ್ತಾರೆ?

ಶಾಲಾ ಮಕ್ಕಳು ತಮ್ಮ ಪಾಡಿಗೆ ತಾವು ಅಭ್ಯಾಸ ಮಾಡುವುದನ್ನು ಬಿಟ್ಟು ಈ ಸರ್ವಾಂತರ್ಯಾಮಿ ಕಸಕ್ಕೆ ತಲೆ ಕೊಡುವುದು ಸರಿಯೇ?

ಹೀಗೆ ಅನೇಕ ಪ್ರಶ್ನೆಗಳು ಎದ್ದು ಬಂದದ್ದು ಹೌದು. ಶಾಲೆಯಲ್ಲಿ ಮಕ್ಕಳು ಇತರ ವಿಷಯಗಳ ಜೊತೆ ಪೌರನೀತಿಯನ್ನೂ ಕಲಿಯುತ್ತಾರೆ. ಅಂದ ಬಳಿಕ ಈ ಕಸದ ನಿರ್ವಹಣೆ ಎಂಬುದೇ ಯಾಕೆ ಮಕ್ಕಳಿಗೆ ತಾವು ಕಲಿಯುವ 'ಥಿಯರಿ'ಯ 'ಪ್ರಾಕ್ಟಿಕಲ್' ಪ್ರಾಜೆಕ್ಟ್ ಆಗಬಾರದು? ಯೋಚಿಸುತ್ತಾ ಹೋದಂತೆ ಇನ್ನೂ ಅನೇಕ ಸಂಗತಿಗಳು ಗಮನಕ್ಕೆ ಬಂದವು. ಮಕ್ಕಳಿಗೆ ಅಷ್ಟೇ ಅಲ್ಲ, ಬಹಳಷ್ಟು ಜನ ದೊಡ್ಡವರಿಗೂ ಕೂಡ ಪ್ರಾಕ್ಟಿಕಲ್ ಪೌರನೀತಿ ಗೊತ್ತೇ ಇಲ್ಲಾ. ರಾಜ್ಯಸರ್ಕಾರದ ಹಾಗೂ ಕೇಂದ್ರ ಸರ್ಕಾರದ ಕುರಿತಾಗಿ ಅನೇಕ ಸಂಗತಿಗಳು ತಿಳಿದಿರುತ್ತವೆ. ರಾಷ್ಟ್ರಪತಿಯ ಕರ್ತವ್ಯಗಳೇನು ಎಂಬುದು ಗೊತ್ತಿರುತ್ತದೆ. ಆದರೆ ನಮ್ಮ ವಾರ್ಡಿನ ಕಾರ್ಪೊರೇಟರ್ ಬಗ್ಗೆ ಏನೂ ಗೊತ್ತಿರುವುದಿಲ್ಲ.

ನಮ್ಮದು ಒಂದು ಪ್ರಜಾಪ್ರಭುತ್ವ. ಈ ಪ್ರಜಾಪ್ರಭುತ್ವ ಯಶಸ್ವಿಯಾಗಬೇಕೆಂದರೆ ನಮ್ಮ ಕಸದ ಸಮಸ್ಯೆ, ಕುಡಿಯುವ ನೀರಿನ ಸಮಸ್ಯೆ ಬಗೆಹರಿಯಬೇಕೆಂದರೆ ನಮ್ಮ ಪೌರಪ್ರಜ್ಞೆ ಹೆಚ್ಚಬೇಕು.

ನಾವು ಪ್ರಜೆಗಳಾಗಿ ನಮ್ಮ ಪಾತ್ರಗಳನ್ನು ನಮ್ಮ ಜವಾಬ್ದಾರಿಯನ್ನು ಹೆಚ್ಚು ಸರಿಯಾಗಿ ನಿರ್ವಹಿಸಬೇಕು. ನಾವು ಸದಾಕಾಲ ಕೇವಲ ಸರಕಾರವನ್ನು ಬೈಯುತ್ತ ಕೂಡದೆ ನಮ್ಮ ಜಡತ್ವವನ್ನು ಕೊಡವಿ, ಆಲಸ್ಯವನ್ನು ದೂರಮಾಡಿ ಸಾಮಾಜಿಕ ಸಮಸ್ಯೆಗಳಿಗೆ ಸಕ್ರಿಯವಾಗಿ ಸ್ಪಂದಿಸಬೇಕು.

ಈ ನಿಟ್ಟಿನಲ್ಲಿ ಮೊದಲ ಹೆಜ್ಜೆಯಾಗಿ ಈ ಕೆಲವು ಪ್ರಶ್ನೆಗಳನ್ನು ಕೊಡುತ್ತಿದ್ದೇವೆ.

ಉತ್ತರಗಳನ್ನು ಹುಡುಕಿ ಮಕ್ಕಳೊಂದಿಗೆ ಚರ್ಚಿಸಿ.

೧. ನಿಮ್ಮ ಮನೆಯಿರುವ ವಾರ್ಡ್ ಸಂಖ್ಯೆ ಎಷ್ಟು?
೨. ನಿಮ್ಮ ವಾರ್ಡ್ ಕಾರ್ಪೊರೇಟರ್ ಯಾರು?
೩. ಕಾರ್ಪೊರೇಟರ್ ಅಧಿಕಾರಾವಧಿ ಎಷ್ಟು?
೪. ನಿಮ್ಮ ವಾರ್ಡ್ ಕಚೇರಿ ಎಲ್ಲಿದೆ?
೫. ನಿಮ್ಮ ವಾರ್ಡ್ ಕಾರ್ಪೊರೇಟರ್ ಎಷ್ಟು ಸಲ ತಿಂಗಳ ಸಭೆ ನಡೆಸಿದ್ದಾರೆ?
೬.ನಿಮ್ಮ ಮನೆ ಸಮೀಪದ ಕಸದ ಗುಂಡಿ ತುಂಬಿ ತುಳುಕುತ್ತಿದ್ದರೆ ಯಾರಿಗೆ/ಎಲ್ಲಿಗೆ ದೂರು ಕೊಡುತ್ತೀರಿ?
೭. ಪೌರ ಕಾರ್ಮಿಕರು ಕಸದ ಗುಂಪಿಗೆ ಬೆಂಕಿ ಹಚ್ಚಿ ಸುಡುತ್ತಿದ್ದರೆ ಏನು ಮಾಡುತ್ತೀರಿ?
೮. ಸಾರ್ವಜನಿಕ ನಳ ಸೋರುತ್ತಿದ್ದರೆ/ನೀರಿನ ಪೈಪ್ ಒಡೆದು ನೀರು ಹರಿಯುತ್ತಿದ್ದರೆ ಯಾರಿಗೆ ತಿಳಿಸುತ್ತೀರಿ?
೯.ನಿಮ್ಮ ಮನೆಯ ಹತ್ತಿರದ ರಸ್ತೆಯ ರಿಪೇರಿ/ಡಾಂಬರೀಕರಣ ಕೆಲಸ ನಡೆದಿದ್ದರೆ ಅದಕ್ಕೆ ಮಂಜೂರಾಗಿರುವ ರೊಕ್ಕ ಎಷ್ಟು ಎಂಬುದನ್ನು ಎಲ್ಲಿಂದ/ಯಾರಿಂದ ಕೇಳಿ ತಿಳಿದು ಕೊಳ್ಳುತ್ತೀರಿ?

**ಸಂಜೀವ್ ಕುಲಕರ್ಣಿ**

ಮನಸು ನಲಿದಿದೆ
ಕನಸು ತುಂಬಿದೆ
ಬೆಳೆದೆ ಆ ಲೋಕದೊಳು
ಕಣ್ಣು ಕಾಣದು
ಕಿವಿ ಕೇಳದು
ಮಾತನಾಡಲಿಕ್ಕೆ ಬಾರದು
ವಿಧಿಯೇ, ಏನಿದು ಪರೀಕ್ಷೆ?
ಇದೆ ನನಗೆ ನಿರೀಕ್ಷೆ
ಬಾಳುವೆ ನಾ ಎಂದು?

ಸಾಯ ಬಯಸುವೆ
ಸಾಯಲಾಗದು
ಬದುಕ ಬಯಸುವೆ
ಬದುಕಲಾಗದು
ನಡುವೆ ಸಿಲುಕಿರುವೆ
ಬಾವಲಿಯಂತೆ
ಕಷ್ಟಗಳಿವೆ ಸಾಯಲು
ಕನಸುಗಳಿವೆ ಬದುಕಲು
ಮನಸುಗಳಿವೆ ತಡೆಯಲು




ಮಹಿಳೆಯರಿದ್ದಾರೆ ಮೃತ್ಯುಕೂಪದಲ್ಲಿ
ಮಕ್ಕಳಿದ್ದಾರೆ ಮಾಯಾಜಾಲದಲ್ಲಿ
ಮಹಿಳೆಯ ಅತ್ಯಾಚಾರ
ಮಕ್ಕಳ ಅಪಹರಣ
ಕೆಡುತಿದೆ ದೇಶ
ಯಾತಕ್ಕೆ ಈ ದ್ವೇಷ?
ದುಷ್ಕರ್ಮಿಗಳೇ ,
ನಿಮ್ಮ ಮಕ್ಕಳೂ ಇದ್ದಾರಲ್ಲವೇ?
ಕಾಮುಕರೇ,
ನಿಮ್ಮ ತಾಯಿಯೂ ಹೆಣ್ಣಲ್ಲವೇ?
ಈಗ ಹೇಳಿ,
ನಮ್ಮ ದೇಶ ಸ್ವತಂತ್ರವಾಗಿದೆಯೇ?

ಪ್ರಿಯಾಂಕ. ಮ. ಪಾಟೀಲ್
೯ನೇ ತರಗತಿ

## ಹಬ್ಬ ಹಬ್ಬ

ಹಬ್ಬ ಹಬ್ಬ
ಎಂತಹ ಹಬ್ಬ
ಸಿಹಿ ಸಿಹಿ ಹಬ್ಬ
ಖಾರ್ ಖಾರ್ ಹಬ್ಬ
ಎಲ್ಲರ ಹಬ್ಬ
ಪಟಾಕಿ ಹಬ್ಬ
ದೀಪದ ಹಬ್ಬ
ದೀಪಾವಳಿ ಹಬ್ಬ

ಸುಧನ್ವ .ರ. ಕುಲಕರ್ಣಿ
೮ನೇ ತರಗತಿ



# ಚುಟುಕುಗಳು

### ಮಖ್ಖಿ
ಆಕಾಶದಲ್ಲಿ ಹಾರುವವು ಹಕ್ಕಿ
ಕಾಳು ತಿನ್ನುವವು ಕುಕ್ಕಿ
ಒಬ್ಬನ ಹೆಸರು ಲಕ್ಕಿ
ಅವನು ಹೊಡೆದ ಮಖ್ಖಿ.

### ನಾಯಕ
ನನ್ನ ಮನೆ ಕಾಯುವುದು
ಡೊಂಕು ಬಾಲದ ನಾಯಕ
ಅನ್ನದ ಋಣ ತೀರಿಸುವದು
ನಿಷ್ಠೆ ಅವನ ಕಾಯಕ

### ಹೋಳಿ ಹಬ್ಬ
ಹೋಳಿ ಹಬ್ಬ ಬಂದಿತು
ಊರ ಊರ ಬೀದಿಗೆ
ಹೊಯ್ ಕೊಂಡವರ ಬಾಯಿಗೆ
ಸವಿಯಾದ ಹೋಳಿಗೆ.

### ಕಾಮನ ಬಿಲ್ಲು
ಬಾನಲಿ ಮೂಡಿದ
ಕಾಮನಬಿಲ್ಲು
ಬಾಣವ ಹೂಡಿ
ದುಷ್ಟರ ಗೆಲ್ಲು

### ಶಾಲೆ
ಸರಸ್ವತಿಯು ನೆಲೆಸಿರುವ
ನನ್ನ ಶಾಲೆ ಮಂದಿರ
ಭೇದ ಭಾವ ಮರೆತು ನಲಿವ
ಹೃದಯ ಹೂವಿನ ಹಂದರ

### ಗೊಲಗೊಮ್ಮಟ
ಆದಿಲ್ ಶಾಹಿ ಕಟ್ಟಿಸಿದ
ಪಿಸು ಧ್ವನಿ ಅರಮನಿ
ಏಳು ಸಲ ಕೇಳುವುದು
ನಾವು ನುಡಿದ ಪ್ರತಿಧ್ವನಿ.

### ಕುಂದಾ
ಅಜ್ಜನ ಊರಿಗೆ ಹೋಗುವೆನು
ಕುಣಿದಾಡುವಳು ನಂದಾ
ಮಲೆನಾಡಿನ ಮಡಿಲಲಿ ಕುಳಿತು
ಸವಿಯುವೆನು ಬೆಳಗಾವಿ ಕುಂದಾ

### ಚೆಂಡು
ಪುಟ್ಟನು ಬೇಡುವ
ಬಣ್ಣದ ಚೆಂಡು
ಬಾನಲಿ ತೇಲುವ
ಸೂರ್ಯನ ಕಂಡು.

ಇರ್ಶಾದ ಕಲಾದಗಿ
8th ನೆ ತರಗತಿ

# ನಗರ ಜೀವನ

ಬಂದ ನನ್ನ ತಮ್ಮ
ನಗರ ಜೀವನ ನೋಡಲು
ನನ್ನನ್ನು ನೋಡಲು
ಬಿಟ್ಟು ಬಂದ ಗುಡಿಸಲು

ನಮ್ಮ ಹಳ್ಳಿಯಲ್ಲಿ
ವಾರಕೊಮ್ಮೆ ಸಂತೆ
ನಿಮ್ಮ ಪೇಟೆಯಲ್ಲಿ
ದಿನದಿನವೂ ಸಂತೆಯ ದೊಡ್ಡ ಕಂತೆ

ನಮ್ಮ ಹಳ್ಳಿಯಲ್ಲಿ
ಹೊಲದ ಕೆಲಸ ದೊಡ್ಡದು
ನಿಮ್ಮ ಪೇಟೆಯಲ್ಲಿ
ಮೆಡಿಕಲ್ ಕಚೇರಿಗಳೇ ದೊಡ್ಡವು

ಅಣ್ಣಾ, ಅಣ್ಣಾ ನಾನು ಹೊರಟೆ
ನಮ್ಮ ಹಳ್ಳಿಗೆ
ನೀನು ಮತ್ತೆ ಬಾ
ನಮ್ಮ ಹಳ್ಳಿಗೆ.

ಆದಿತ್ಯ ಭಟ್
೫ ನೆ ತರಗತಿ

# ಸ್ವಾತಂತ್ರ್ಯ

ಭಾರತ ಮಾತೆಗೆ ಸ್ವಾತಂತ್ರ್ಯ ನೀಡಲು
ಹೋರಾಡಿದರು ಕೋಟಿ ಜನ
ಅವರ ಯುದ್ಧದ ಫಲವೇ ಇಂದು
ದೇಶವಾಗಿದೆ ನಂದನ.

ರಕ್ತಕೊಡಿ ಸ್ವಾತಂತ್ರ್ಯವ ಕೊಡುವೆನು
ಎಂದರು ನಮ್ಮಯ ನೇತಾಜಿ
ಬಿಳಿಯರೇ ಭಾರತ ಬಿಟ್ಟು ತೊಲಗಿರಿ
ಎಂದು ಘರ್ಜಿಸಿದ ಗಾಂಧೀಜಿ.

ದೇಶದ ಜನತೆಯ ಚಳುವಳಿ ಮಾಡಲು
ಕರಗಿತು ಬಿಳಿಯರ ತಾಕತ್ತು
ಬ್ರಿಟೀಷರು ಭಾರತ ಬಿಟ್ಟು ತೊಲಗಲು
ಕಳೆಯಿತು ದೇಶದ ಆಪತ್ತು.

ಗುರುರಾಜ ಹೆಗಡೆ
೭ನೇ ತರಗತಿ











# ಬೆಳ್ಳಿಯ ಬೆಳಕು

ಹುಲ್ಲಿನ ಗರಿಯಲಿ ಮಂಜಿನ ಹನಿಗಳು
ಮಿನುಗಿವೆ ಬೆಳಗಿನ ಸಮಯದಲಿ

ಹಸಿರನು ಹಾಸಿದ ಹುಲ್ಲಿನ ಬಯಲನು
ನೋಡಲು ಕಣ್ಣಿಗೆ ಆನಂದ
ಬೆಳಗಿನ ಸೂರ್ಯನು ಬೆಳದಿಹ ಬಣ್ಣದ
ಮೇಲಿನ ಮುಗಿಲಿಗೆ ಬಲು ಚೆಂದ

ಹಕ್ಕಿಗಳುಲಿದವು ಚಿಲಿಪಿಲಿ ರಾಗದಿ
ಕಿವಿಗಳಿಗಂಪಿನ ಸುಖ ನೀಡಿ
ಮೊಗ್ಗುಗಳೆಲ್ಲ ಅರಳಿದುವೀಗಲೆ
ಕಣ್ಣಿಗೆ ಹೊಸ ಹಬ್ಬವ ನೀಡಿ

ಸೂರ್ಯನ ಕಿರಣವು ಎಲ್ಲೆಡೆ ಹಂಚಿ
ಎಲ್ಲರ ಬಾಳಿನ ಬೆಳಕಾಗಿ
ಹಾಡುತ ಕುಣಿಯುತ ಮಳೆಯಲಿ
ಆಡುತ
ಮಿನುಗಿವೆ ಬೆಳಗಿನ ಸಮಯದಲಿ

ಸೌಜನ್ಯಾ
ಇನಾಮದಾರ್
೮ನೇ ತರಗತಿ



ಶನಿವಾರದ ಸ್ಪರ್ಧೆಯಲ್ಲಿ ಮಾಡಿದ ಹೂವಿನ ರಂಗೋಲಿ



# मां

शाम की सुहानी हवा में
समंदर की लहर की आवाजो में
सूरज ढलने के समय में
तुम याद आती हो मां

चारो और अंधेरा छाने पर
डरावने सपने आने पर
उस वक्त को इन होने पर
तुम याद आती हो मां

जब कभी जोर से रोति हु
जब कभी ख़ुशी से हस्ती हु
जब कभी अकेलापन महसूस करती हु
तुम याद आती हो मां

ಶ್ರೇಯಸಿ
೮ನೇ ತರಗತಿ






ಧ್ಯಾನವನ್ನು ಹೀಗೂ ಮಾಡಬಹುದು!!

ಧ್ಯಾನ ನಮ್ಮ ಅಂತರಂಗದ ಸ್ನಾನ











ಮಕ್ಕಳ ಚಿತ್ರಗಳು




ಪತ್ರಿಕಾ ಜಾಯಮಾನದ ಚಿತ್ತಾಕರ್ಷಣೀಯ ಲೇಖನ ವ್ಯವಸಾಯದಲ್ಲಿ ಲವಲವಿಕೆ ಉತ್ಸಾಹಗಳಿಂದ ತೊಡಗಿಸಿಕೊಂಡಿರುವ ಯುವಪೀಳಿಗೆಯ ಕೆಲವು ಪ್ರಚಲಿತ ವ್ಯಕ್ತಿಗಳಲ್ಲಿ ಎ.ಆರ್. ಮಣಿಕಾಂತ್ ಸಾಕಷ್ಟು ಹೆಸರುವಾಸಿ. ಅಂತರಂಗವನ್ನು ಮಿಡಿದು ಮಾರ್ದವಗೊಳಿಸುವ, ತಿವಿದು ತಿಣುಕುವ, ಬೆಚ್ಚಿಸಿ ಕಲಸುವ ಮಾತುಗಾರಿಕೆಯ ಇವರ ಕೌಶಲಪೂರ್ಣ ಸಾಮರ್ಥ್ಯ ಸುಂದರವಾದದ್ದು.

ಅವಕಾಶ ವಂಚಿತರ, ಅಸಹಾಯಕ ಕಂಗಾಲರ, ವಿಕಲಚೇತನರ ಎದೆಗುಂದದ ನಿರಂತರ ಪರಿಶ್ರಮ ಹಾಗೂ ಆಶಾಭಾವನೆಯ ಪ್ರೇರಣೆಯಿಂದ ಅವರು ಮುಟ್ಟಿದ ಮೇಲ್ನೆಲೆ, ರೂಢಿಸಿಕೊಂಡ ವಿನಯಶಾಲೀನತೆ ಮತ್ತಿತರ ಸಕಾರಾತ್ಮಕ ವಿವರಗಳು ಈ ಕೃತಿಯಲ್ಲಿ ಪರಿಣಾಮಕಾರಿಯಾಗಿ ಮೂಡಿಬಂದಿವೆ. ಈ ಪುಸ್ತಕ ಬೀರುವ ಪ್ರಭಾವದ ಅರಿವಿನಲ್ಲಿ, ನಮ್ಮ ಬದುಕಿನ ಕೆಲವೊಂದು ಪ್ರಸಂಗಗಳು ನೆನಪಾಗಿ ನಮ್ಮ ಒಳಗಿನಲ್ಲಿ ಭಾವಾಲೋಚನೆಯ ಕಿಡಿಯನ್ನು ಹೊತ್ತಿಸಿ ಚಿಂತನೆಗೆ ಹಚ್ಚುತ್ತವೆ. ಕಣ್ಣಿಗೆ ಕಟ್ಟುವ ಚಿತ್ರಣ, ಸ್ಫುಟ ಹಾಗೂ ಪಾರದರ್ಶಕ ನಿರೂಪಣೆ, ತಾಯಿಯ ಕೈತುತ್ತಿನ ನೆನಪಿನಂತೆ ಹಳವಂಡವಾಗಿ ಕಾಡುವ ಕೆಲವು ಅಪರೂಪದ ಘಟನೆಗಳು ಈ ಪುಸ್ತಕದ ಬಗೆಗೆ ಮೆಚ್ಚುಗೆಯನ್ನು ಇಮ್ಮಡಿಸುತ್ತವೆ.

Suggested book




**The Croods** is a 2013 American 3D computer-animated adventure comedy film produced by DreamWorks Animation. It features the voices of Nicolas Cage, Emma Stone, Ryan Reynolds, Catherine Keener, Clark Duke, and Cloris Leachman. The film is set in a fictional prehistoric Pliocene era known as The Croodaceous (a period which contains fictional prehistoric creatures) when a caveman's position as a "Leader of the Hunt" is threatened by the arrival of a prehistoric genius who comes up with revolutionary new inventions as they trek through a dangerous but exotic land in search of a new home.

The Croods was written and directed by Kirk DeMicco and Chris Sanders, and produced by Kristine Belson and Jane Hartwell. The film premiered at the 63rd Berlin International Film Festival on February 15, 2013.

The Croods received generally positive reviews, and proved to be a box office success with a sequel set for December 22, 2017 and a TV series already put in development. A must watch entertaining movie for kids!!

# ಬಾಲಬಳಗದ ಅಡಿಗೆ ಮನೆಗೆ
# ಸ್ವಾಗತ



ಅಡಿಗೆ ಭಟ್ಟರು: **ಮಕ್ಕಳೇ!!**

ಶನಿವಾರ ೨೦-೧೨-೨೦೧೪ ರಂದು
ನಡೆದ ಸ್ಪರ್ಧೆಗಳ ಚಿತ್ರಗಳು



















*READY*



1.ಸಿತಾರ್ ವಾದನ: ಸಮೀಪ ಕುಲಕರ್ಣಿ,ಪುಣೆ.
ದಿನಾಂಕ:೧೭/೧/೧೫
ಸಮಯ: ಮುಂಜಾನೆ ೯.೦೦-೧೦.೩೦

2.ಗಣರಾಜ್ಯೋತ್ಸವ ಕಾರ್ಯಕ್ರಮ.(ಶಿಶುವಿಹಾರ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ)





3. ಮಕ್ಕಳ ಹಬ್ಬ!!
ದಿನಾಂಕ: ೬/೨/೧೫ ಮತ್ತು ೭/೨/೧೫

## ಬರಲಿರುವ ಕಾರ್ಯಕ್ರಮಗಳು

# ನಮ್ಮ ಬಳಗ



ಸಂಪದಾ



ತುಷಾರ



ದೀಪಕ



ಶರತ



ಮಿಂಚು



ಚಿನ್ಮಯೀ

ನಮ್ಮ ಈ ಪುಟ್ಟ ಪ್ರಯತ್ನಕ್ಕೆ ನಿಮ್ಮ ಅನಿಸಿಕೆಗಳು ಮತ್ತು ಮೆಚ್ಚುಗೆಗಳ ಮೂಲಕ ಪ್ರೋತ್ಸಾಹಿಸಿ.

ನೀವು ಕೂಡ ನಮ್ಮ ಜೊತೆ ಯಾವುದಾದರೂ ರೀತಿಯಲ್ಲಿ ಕೈ ಜೋಡಿಸಬಹುದಾದಲ್ಲಿ ತುಂಬಾ ಸಂತೋಷ.

ನಮಗೆ ಮಿಂಚಂಚೆ ಬರೆಯಿರಿ.

chiguruchilume@gmail.com